ಅ.ದಾ.193/2017 ಡಿಡಬ್ಲ್ಯು-1

ದಿನಾಂಕಃ24.08.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀಮತಿ ಕೆ.ವಿ. ವಕೀಲರಿಂದ:**

ನಾನು ಸಂಸೆ ಗ್ರಾಮದ ಎಸ್.ಕೆ.ಮೇಗಲ್ ನ ವಾಸಿ. ನನ್ನ ತಂದೆ ಮತ್ತು ಅಜ್ಜರವರು ಸಹಾ ಅಲ್ಲಿಯೇ ವಾಸವಿದ್ದರು. ನನ್ನ ಬಳಿ ಪಿತ್ರಾರ್ಜಿತವಾಗಿ ಬಂದ ಆಸ್ತಿ ಇದೆಯಾ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ನಾನು ನೋಡಿಲ್ಲ. ಎಸ್.ಕೆ.ಮೇಗಲ್ ಗ್ರಾಮದಲ್ಲಿ ಧರ್ಮಸ್ಥಳದ ವಿರೇಂದ್ರ ಹೆಗಡೆಯವರ ಜಮೀನುಗಳು ಇವೆ ಎಂದರೆ ಸರಿ. ಆ ಜಮೀನುಗಳ ಸ.ನಂ. ಗಳು ನನಗೆ ಗೊತ್ತಿಲ್ಲ. ಆ ಜಮೀನುಗಳು ನನಗಾಗಲೀ ಹಾಗೂ ನನ್ನ ಕುಟುಂಬದವರಿಗಾಗಲೀ ಬಂದಿದೆಯ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಎದುರು ಹಕ್ಕು ಏನೆಂದು ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ವಾದಿ ನನಗೆ ಗೊತ್ತು. ವಾದಿಗೆ ಸಂಸೆ ಗ್ರಾಮದಲ್ಲಿ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯೂ ಸಹಾ ಎಸ್.ಕೆ.ಮೇಗಲ್ ನ ವಾಸಿ ಎಂದರೆ ಸರಿ. ವಾದಿ ಕೃಷಿಕರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನು ನನ್ನ ಜಮೀನಿನ 1000 ಅಡಿ ದೂರದಲ್ಲಿ ಇದೆ. ವಾದಿಯ ಜಮೀನಿನ ಸ.ನಂ.222/ಪಿ6 ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನು ಗದ್ದೆಯಾಗಿದೆ. ಆ ಗದ್ದೆಗೆ ನಾನು ಹೋಗಿ ನೋಡಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.